ಸಿಸಿ ನಂಃ 2671/2021
ಸಿ.ಡ್ಲ್ಯೂ 6/ಪಿ.ಡಬ್ಲ್ಯೂ 4

**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.</u>**

**<u>ಸಿಸಿ ನಂಃ 2671/2021</u>**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಲೂಸಿ ಬಸ್ಮಿ |
| ಗಂಡನ ಹೆಸರು | ಃ | ಸ್ಯಾಮಸನ್ |
| ವಯಸ್ಸು | ಃ | 43 ವರ್ಷ |
| ಉದ್ಯೋಗ | ಃ | ನರ್ಸ |
| ವಾಸ ಸ್ಥಳ | ಃ | ಧಾರವಾಡ . |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು : 16-09-2023**

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ**

ಚಾಸಾ-1 ನನ್ನ ತಾಯಿ . ದಿಃ 29-5-2020 ರಂದು ಸಾಯಂಕಾಲ 4.30 ಗಂಟೆಗೆ ನನ್ನ ತಾಯಿ ಧಾರವಾಡದಿಂದ ನಮ್ಮ ಮನೆ ಕಡೆಗೆ ಬರುತ್ತಿದ್ದಾಗ ಇಬ್ಬರು ವ್ಯಕ್ತಿಗಳು ಮೋಟರ್ ಸೈಕಲ್ ಬಂದು ಸದರಿ ಮೋಟರ್ ಸೈಕಲ್ ಹಿಂಬದಿ ಸವಾರ ನನ್ನ ತಾಯಿಯ ಕೊರಳಲ್ಲಿದ್ದ ಬಂಗಾರದ ಸರ ದೋಚಿಕೊಂಡು ಪರಾರಿಯಾಗಿದ್ದರು . ಸದರಿ ಘಟನೆ ವನಶ್ರೀ ನಗರದ , ನೀರಲಕಟ್ಟಿ ಪ್ಲಾಟ ಹತ್ತಿರ ಆಗಿತ್ತು . ಸದರಿ ಘಟನೆಗೆ ಸಂಬಂಧಿಸಿದಂತೆ ನನ್ನ ತಾಯಿ ಪೋಲಿಸರಿಗೆ ದೂರು ನೀಡಿದ್ದಳು . ಸದರಿ ಘಟನೆಯಾದ 6-7 ತಿಂಗಳ ನಂತರ ನನ್ನ ತಾಯಿಯ ಸದರಿ ಸರ ಬೆಂಗಳೂರಿನಲ್ಲಿ ಸಿಕ್ಕಿದೆ ಎಂದು ಪೋಲಿಸರು ತಿಳಿಸಿದ್ದರು . ಆದ್ದರಿಂದ ನಾನು ನನ್ನ ತಾಯಿಯನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಪೋಲಿಸ್ ಠಾಣೆಗೆ ಹೋಗಿದ್ದೆವು . ಅಲ್ಲಿ ಪೋಲಿಸರು ನಮಗೆ ಗಟ್ಟಿ ಬಂಗಾರ ಕೊಟ್ಟಿದ್ದರು . ಅದನ್ನು ನಾವು ಒಂದು ದಾಖಲೆಗೆ ಸಹಿ ಮಾಡಿ ಪಡೆದುಕೊಂಡಿದ್ದೆವು . ಆ ಕಾಲಕ್ಕೆ ನಾನು ಸಹಿ ಮಾಡಿರುವ ಸದರಿ ದಾಖಲೆಯ ದೃಡೀಕೃತ ನಕಲನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಶಾನೆ-ಪಿ-6 ಎಂದು ಗುರುತಿಸಲಾಯಿತು . ಅದೇ ಕಾಲಕ್ಕೆ ನಿಶಾನೆ-ಪಿ-5 ರ ಪೋಟೋ ತೆಗೆದಿದ್ದರು .

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

ಸಿಸಿ ನಂಃ 2671/2021
ಸಿ.ಡ್ಲ್ಯೂ 6/ಪಿ.ಡಬ್ಲ್ಯೂ 4

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ಪೋಲಿಸರು ನಮಗೆ ಬಂಗಾರದ ಸರ ನೀಡಿದ್ದರು ಎಂದರೆ ಸರಿಯಲ್ಲ . ನಮಗೆ ಸರ ನೀಡಿದ್ದರು ಸಹ ಈಗ ಅದರ ಬಗ್ಗೆ ನನಗೆ ನೆನಪಿಲ್ಲ ಎಂದರೆ ಸರಿಯಲ್ಲ .

**ಪಾಟೀಸವಾಲುಃ ಆರೋಪಿ ನಂಃ 3 ಮತ್ತು 4 ರವರ ಪರ ಶ್ರೀ ಐ ಐ ಎಸ್ ವಕೀಲರಿಂದ**

ನನ್ನ ತಾಯಿಯ ಕಳೆದು ಹೋದ ಸರ ಕಳೆಯದಾಗಿತ್ತು ಎಂದರೆ ಸರಿ . ಪೋಲಿಸರು ನಮಗೆ ಗಟ್ಟಿ ಬಂಗಾರ ನೀಡಿದ್ದರು ಎಂದರೆ ಸರಿ .

**ಪಾಟೀಸವಾಲುಃ ಆರೋಪಿ ನಂಃ 1 ಮತ್ತು 2 ರವರ ಪರ ವಕೀಲರು ಮೇಲಿನ ಪಾಟೀಸವಾಲನ್ನು ಅನುಕರಿಸಿಕೊಂಡಿರುತ್ತಾರೆ .**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.